# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

**ಸ್ಪೆಷಲ್ ಕೇಸ್(ಪಿ.ಸಿ.) ಸಂಖ್ಯೆ: 03/2020**

ಸಿಡಬ್ಲ್ಯೂ: 04
ಪಿಡಬ್ಲ್ಯೂ: 02

**<u>ದಿನಾಂಕ 28-05-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

| | |
|---|---|
| ಸಾಕ್ಷಿದಾರರ ಹೆಸರು | : ಕೃಷ್ಣೇಗೌಡ |
| ತಂದೆಯ ಹೆಸರು | : ಲೇಟ್ ವೆಂಕಟಪ್ಪ |
| ವಯಸ್ಸು | : 64 ವರ್ಷ |
| ಉದ್ಯೋಗ | : ನಿವೃತ್ತ ಎ.ಡಿ.ಎಲ್.ಆರ್. |
| ವಾಸ ಸ್ಥಳ | : ತುಮಕೂರು |

**<u>ಮುಖ್ಯ ವಿಚಾರಣೆ: ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದ:</u>**

2018 ರಿಂದ ಜನವರಿ-2020 ರವರೆಗೆ ನಾನು ಪ್ರಭಾರ ಎ.ಡಿ.ಎಲ್.ಆರ್. ಎಂದು ಚಳ್ಳಕೆರೆಯಲ್ಲಿ ಸೇವೆ ಸಲ್ಲಿಸಿದ್ದೇನೆ.

2. ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ಗುರುತಿಸುತ್ತಿದ್ದು ಆತ ಸದರಿ ಚಳ್ಳಕರೆ ಆಫೀಸಿನಲ್ಲಿ ಸರ್ವೆ ಸೂಪರ್ ವೈಸರ್ ಎಂದು ನಾನು ಸೇವೆ ಸಲ್ಲಿಸುತ್ತಿದ್ದ ಅವಧಿಯಲ್ಲಿ ಆತನೂ ಸೇವೆ ಸಲ್ಲಿಸುತ್ತಿದ್ದ. ಆತ ನನ್ನ ಅಧೀನದಲ್ಲಿ ಸೇವೆ ಸಲ್ಲಿಸುತ್ತಿದ್ದ.

3. ದಿನಾಂಕ 14-02-2019 ರಂದು ನಾನು ನಾನು ಫಿಲ್ಡ್ ಗೆ ಹೋದಾಗ ಎಸಿಬಿ ಇನ್ಸ್ ಪೆಕ್ಟರ್ ರವರು ನನಗೆ ಫೋನ್ ಮುಕಾಂತರ ನನ್ನ ಅಧೀನದಲ್ಲಿರುವ ಆರೋಪಿಯನ್ನು ಟ್ರ್ಯಾಪ್ ಮಾಡಿದ್ದಾಗಿ ಮತ್ತು ನಾನು ಕಛೇರಿಗೆ ಬರುವಂತೆ ತಿಳಿಸಿದರು. ಅದರಂತೆ ನಾನು ಕಛೇರಿಗೆ ಸಂಜೆ 6.00 ಅಥವಾ 6.30 ಗಂಟೆಗೆ ಬಂದೆ. ಅವರು ನನಗೆ ತಾವು ಆಗಲೇ ದಾಖಲಿಸಿಕೊಂಡಿದ್ದಂತಹ ಆಡಿಯೋ ಸಂಭಾಷಣೆಯನ್ನು ಕೇಳಿಸಿದರು. ನಾನು ಅದನ್ನು ಆಲಿಸಿದಾಗ ಅದರಲ್ಲಿ ಆರೋಪಿತನ ಧ್ವನಿ ಇರುವುದು ಕಂಡುಬಂತು. ಅಲ್ಲದೇ ಅವರು ತಾವುಗಳು ಆಗಲೇ ಸಂಗ್ರಹಿಸಿದಂತಹ ದಾಖಲೆಗಳನ್ನು ದೃಢೀಕರಿಸಿಕೊಂಡುವಂತೆ ಕೋರಿಕೊಂಡ ಮೇರೆಗೆ ನಾನು ಅವುಗಳನ್ನು ದೃಡಿಸೀಕರಿಸಿ ಕೊಟ್ಟೆ. ಈಗ ನಾನು ಆ ಸದರಿ ದಾಖಲೆಗಳನ್ನು ನೋಡುತ್ತಿದ್ದು ಅವುಗಳು ಪುಟ

ಸಂ.209 ರಿಂದ 215 ರವರೆಗೆ ಇದ್ದು ಅವುಗಳನ್ನು ಈಗಾಗಲೇ ನಿಪಿ-14 ಎಂದು ಗುರುತಿಸಲಾಗಿರುತ್ತದೆ. ಸದರಿ ನಿಪಿ-14 ರ ಪ್ರತೀ ಪುಟದ ಮೇಲೂ ನನ್ನ ಸಹಿಗಳು ಇದ್ದು ಅವುಗಳನ್ನು ನಿಪಿ-14(ಎ) ರಿಂದ (ಜಿ) ಎಂದು ಅನುಕ್ರಮವಾಗಿ ಗುರುತಿಸಲಾಯಿತು. ಈ ಕುರಿತು ನಾನು ನನ್ನ ಹೇಳಿಕೆಯನ್ನು ಪೊಲೀಸ್ ಇನ್ಸ್ ಪೆಕ್ಟರ್‌ರವರಿಗೆ ಕೊಟ್ಟಿದ್ದೇನೆ.

**<u>ಪಾಟೀ ಸವಾಲು:</u>** ಶ್ರೀಮತಿ ಎನ್.ಎನ್ ವಕೀಲರು ಕಾಲಾವಕಾಶ ಕೋರಿದ್ದು ಕಾರಣ ಒಂದು ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.